# ಹೀಗೊಂದು ಉಪ್ಪಿ-ಟ್ಟು ಸಂದರ್ಶನ



ಹೌದು. ಭ್ರಷ್ಟಾಚಾರದ ವಿರುದ್ಧ ಹೋರಾಡುವ ಬಗ್ಗೆ ನಾನು ಈಗಾಗಲೇ ಚಿತ್ರರಂಗದ ಖ್ಯಾತ ಫೈಟ್ ಮಾಸ್ಟರ್‌ಗಳೊಂದಿಗೆ ಚರ್ಚಿಸಿದ್ದೇನೆ. ಅವರನ್ನೆಲ್ಲಾ ಭ್ರಷ್ಟಾಚಾರ ನಿಗ್ರಹ ದಳಕ್ಕೆ ಸೇರಿಸುತ್ತೇನೆ!

■ **ಪ್ರಕಾಶ್ ಶೆಟ್ಟಿ**

ಆಟೋ ನಿಲ್ದಾಣದಲ್ಲಿ ನಾಲ್ಕೈದು ಮಂದಿ ಆಟೋ ಚಾಲಕರು ನಿಂತುಕೊಂಡಿದ್ದರು. ಅವರಲ್ಲಿ ಒಬ್ಬರ ಮುಖಚರ್ಯೆ ನೋಡಿ ಆಶ್ಚರ್ಯವಾಯಿತು. ಥೇಟ್, ಸಿನಿಮಾ ನಟ ಉಪೇಂದ್ರ ತರಾನೇ ಇತ್ತು. ಮೊನ್ನೆ ಉಪೇಂದ್ರ ಖಾಕಿ ಶರ್ಟು ಧರಿಸಿ ಪ್ರಜಾಕೀಯಕ್ಕಿಳಿದದ್ದೇನೋ ಗೊತ್ತು. ಆದರೆ ಇಷ್ಟು ಬೇಗ ಇಲ್ಲಿ ಚುನಾವಣಾ ಪ್ರಚಾರ ಶುರು ಮಾಡಿಬಿಟ್ಟರಾ? ಸಂಶಯ ಬೇಡವೆಂದು ಹೋಗಿ ವಿಚಾರಿಸಿದೆ.

‘ನೀವು ಉಪೇಂದ್ರ ಅಲ್ಲವೇ?’

‘ಯಾಕ್ಸಾರ್... ಡೌಟಾ? ನಾನೇ ಉಪ್ಪಿ. ಈ ಖಾಕಿ ಚಾಲಕರೆಲ್ಲಾ ಇನ್ನು ಮುಂದೆ ನನ್ನ ಪ್ರಜಾಕೀಯದ ಬೆಂಬಲಿಗರು. ’

‘ಪಕ್ಷಕ್ಕೆ ಏನು ಹೆಸರಿಟ್ಟಿದ್ದೀರಾ ?’

‘ಕೆಲವು ಟೈಟಲ್ ಗಳನ್ನು ಫಿಲ್ಮ್ ಛೇಂಬರ್ಸ್ ಗೆ ಕಳುಹಿಸಿದ್ದೇನೆ. ನೋಡೋಣ ಯಾವುದು ಆಯ್ಕೆಯಾಗುತ್ತೆ ಅಂತ.’

‘ಪಕ್ಷಕ್ಕೆ ಬೇಕಾಗಿರುವ ಹೆಸರನ್ನು ಚುನಾವಣಾ ಆಯೋಗಕ್ಕಕಲ್ಲವೇ ಕಳುಹಿಸಬೇಕಾದದ್ದು ಸಾರ್?’

‘ನನಗೆ ಗೊತ್ತೂರೀ! ನೋಡಿ, ಫಿಲ್ಮ್ ಛೇಂಬರ್ಸ್‌ನವರು ಆಯ್ಕೆ ಮಾಡಿದ ಹೆಸರನ್ನು ಅಂತಿಮ ಆಯ್ಕೆಗೆ ಆಯೋಗಕ್ಕೆ ಕಳುಹಿಸುತ್ತೇವೆ.’

‘ಬೇಸರ ಮಾಡ್ಬೇಡಿ. ಇದು ನಾನು ಹೇಳೋದಲ್ಲ.